**C.C. 1526-2017**

2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

ಸಿ.ಸಿ.ನಂಃ 1526 ಃ2017

| | | | |
|---|---|---|---|
| ಸಾಕ್ಷಿದಾರರ ಹೆಸರು | ರವಿಕುಮಾರ್ | ಹೆಚ್. ಸಿ | |
| ತಂದೆಯ ಹೆಸರು | ವೀರಭದ್ರ ಆಚಾರ | ಪಿ ಡಬ್ಲ್ಯು | 1 |
| ವಯಸ್ಸು | 49 ವರ್ಷ | | |
| ಉದ್ಯೋಗ | ಎ.ಎಸ್.ಐ | | |
| ವಾಸಸ್ಥಾನ | ತಲಘಟ್ಟಪುರ, ಬೆಂಗಳೂರು | | |

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 19.03.2024

299 ರ ಸಿ.ಆರ್.ಪಿ.ಸಿ ಅಡಿಯಲ್ಲಿ ಮುಖ್ಯ ವಿಚಾರಣೆ ಃ ನ್ಯಾಯಾಲಯದಿಂದ ಃ-

ನಾನು 08.06.2021 ರಿಂದ ಬಸವನಗುಡಿ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ನ್ಯಾಯಾಲಯದಿಂದ ಆರೋಪಿ ರವರ ವಿರುದ್ಧ ಹೊರಡಿಸಿದ ಉದ್ಘೋಷಣೆಯನ್ನು ಜಾರಿ ಮಾಡಲು ಠಾಣೆಯಿಂದ ನನಗೆ ನೇಮಕ ಮಾಡಿರುತ್ತಾರೆ. ದಿಃ 05.02.2022 ರಂದು ಪಂಚರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಆರೋಪಿಯ ಬಗ್ಗೆ ಮಾಹಿತಿ ದೊರೆತರೆ ನ್ಯಾಯಾಲಯಕ್ಕೆ ಆಗಲೀ ಅಥವಾ ನಮ್ಮ ಠಾಣೆಗೆಗೆ ತಿಳಿಸಬೇಕು ಎಂದು ಉದ್ಘೋಷಣೆಯನ್ನು ಮಾಡಿ ಸ್ಥಳದಲ್ಲಿ ಅಂಟಿಸಿರುತ್ತೇನೆ. ಆರೋಪಿಯ ಆಸ್ತಿಯ ಬಗ್ಗೆ ವಿಚಾರಿಸಿದಾಗ ಆತನ ಹೆಸರಿನಲ್ಲಿ ಯಾವುದೇ ಸ್ಥಿರ ಹಾಗೂ ಚರ ಆಸ್ತಿಗಳು ಕಂಡು ಬಂದಿರುವುದಿಲ್ಲ ಎಂದು ಬಿ.ಬಿ.ಎಂ.ಪಿ, ಬನಶಂಕರಿ ಉಪವಿಭಾಗದ ಸಹ ಕಂದಾಯ ಅಧಿಕಾರಿಗಳು ಹಿಂಬರಹ ನೀಡಿರುತ್ತಾರೆ.

ನ್ಯಾಯಾಲಯದಿಂದ ಹೊರಡಿಸಿದ ಉದ್ಘೋಷಣೆಯನ್ನು ನೋಡುತ್ತಿದ್ದು ಅದನ್ನು ನಿಪಿ-1, ಸ್ಥಳದಲ್ಲಿ ಮಾಡಿದ ಮಹಜರ್ ಅನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2 ಎ, ಜಪ್ತಿ ವಾರೆಂಟ್ ಅನ್ನು ನಿಪಿ-3 ಹಾಗೂ ಸಹ ಕಂದಾಯ ಅಧಿಕಾರಿಗಳ ಹಿಂಬರಹವನ್ನು ನಿಪಿ-4 ಎಂದು ಗುರುತಿಸಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ವೇದಮೂರ್ತಿ ಬಿ.ಎಸ್)

2ನೇ ಅ ಮು ಮ ದಂ.